ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೫

**ಪಟ್ಟಿ–೧೨**

# ಕರ್ನಾಟಕ ವಿಧಾನ ಪರಿಷತ್ತು

**ನೂರ ಐವತ್ತೈದನೇ ಅಧಿವೇಶನ**

**ಗುರುವಾರ, ದಿನಾಂಕ: ೨೦ನೇ ಮಾರ್ಚ್, ೨೦೨೫**

---

**ಸಮೂಹ – IV**

೧. ಮುಖ್ಯಮಂತ್ರಿಗಳು

೨. ಉಪ ಮುಖ್ಯಮಂತ್ರಿಗಳು

೩. ಗೃಹ ಸಚಿವರು

೪. ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

೫. ಅಬಕಾರಿ ಸಚಿವರು

೬. ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

---

## ಕೃಷ್ಣಾ ಮೇಲ್ದಂಡೆ ಯೋಜನೆಗೆ ಪ್ರಸಕ್ತ ಬಜೆಟ್‌ನಲ್ಲಿ ಘೋಷಣೆ ಮಾಡಿದ ಹಣಕಾಸಿನ ಆದ್ಯತೆಯ ಬಗ್ಗೆ

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೬೬ (೧೪೭೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷ್ಣಾ ಮೇಲ್ದಂಡೆ ಯೋಜನೆ ಹಂತ–೩ರ ಅಡಿ ಮುಳುಗಡೆಯಾಗುವ ಜಮೀನುಗಳನ್ನು ೫೨೪.೨೫೬ ಮೀ. ಮೂಲಕ ಒಂದೇ ಹಂತದಲ್ಲಿ ಭೂಸ್ವಾಧೀನಪಡಿಸಿಕೊಳ್ಳುವ ಪ್ರಸ್ತಾವನೆಯನ್ನು ಪ್ರಸಕ್ತ ೨೦೨೫–೨೬ನೇ ಸಾಲಿನ ಬಜೆಟ್ ಪ್ಯಾರಾ ೯೪ರಲ್ಲಿ ಸರ್ಕಾರ ಘೋಷಿಸಿದ್ದು, ಈಗಾಗಲೇ

೫೨೨ **FRL** ಅಡಿಯ ವ್ಯಾಪ್ತಿಗೆ ಬರುವ ಜಮೀನುಗಳ ಭೂಸ್ವಾಧೀನ ಪ್ರಕ್ರಿಯೆ ಜಾರಿಯಲ್ಲಿ ಇರುವ ಪ್ರಕರಣಗಳನ್ನು ರದ್ದುಪಡಿಸದೇ ಮುಂದುವರಿಸಿ ಪರಿಹಾರ ಧನ ನೀಡಲಾಗುವುದೇ ; (ಮಾಹಿತಿ ನೀಡುವುದು)

(ಆ) ಬೆಳಗಾವಿಯಲ್ಲಿ ೨೦೨೪ನೇ ಡಿಸೆಂಬರ್ ತಿಂಗಳಲ್ಲಿ ಸಂಬಂಧಪಟ್ಟ ಅಧಿಕಾರಿಗಳು, ಮುಳುಗಡೆ ವ್ಯಾಪ್ತಿಯ ರೈತರು, ಜನಪ್ರತಿನಿಧಿಗಳ ಜೊತೆಗೆ ನಡೆಸಿದ ಸಭೆಯಲ್ಲಿ ಚರ್ಚಿಸಿದಂತೆ ನೀರಾವರಿ ಜಮೀನುಗಳ ಬೆಲೆ ರೂ. ೫೦ ಲಕ್ಷ ಒಣ ಬೇಸಾಯದ ಜಮೀನು ಬೆಲೆ ರೂ. ४೦ ಲಕ್ಷದಂತೆ ಒಪ್ಪಿಗೆ ಐತೀರ್ಪಿನಲ್ಲಿ ಪರಿಹಾರ ಧನ ನೀಡಲಾಗುವುದೇ ; ಇಲ್ಲದಿದ್ದಲ್ಲಿ ಒಪ್ಪಿಗೆ ಐತೀರ್ಪಿನ ಬೆಲೆ ಎಷ್ಟು ; (ಮಾಹಿತಿ ನೀಡುವುದು)

(ಇ) ಪ್ರಸಕ್ತ ವರ್ಷದಲ್ಲಿ ಈ ಯೋಜನೆಯ ಭೂಸ್ವಾಧೀನ ಪುನರ್ವಸತಿ ಕಾರ್ಯಕ್ರಮಗಳಿಗಾಗಿ ಕಾಯ್ದಿರಿಸಿರುವ ಹಣವೆಷ್ಟು ; (ಮಾಹಿತಿ ನೀಡುವುದು)

(ಈ) ಈ ಯೋಜನೆ ಪೂರ್ಣಗೊಳ್ಳಲು ಬೇಕಾದ ಇಂದಿನ ಪರಿಷ್ಕೃತ ಅಂದಾಜು ವೆಚ್ಚವೆಷ್ಟು ?

## ಮಂಗಳೂರು ನಗರದಲ್ಲಿ ಜಿಲ್ಲಾ ಕಾರಾಗೃಹವನ್ನು ಬಾಳೆಪುಣೆಗೆ ವರ್ಗಾವಣೆ ಮಾಡುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) –**

೧೬೭ (೧೩೮೭) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಗಳೂರು ನಗರದ ಜಿಲ್ಲಾ ಕಾರಾಗೃಹವನ್ನು ಬಂಟ್ವಾಳ ತಾಲ್ಲೂಕಿನ ಬಾಳೆಪುಣೆಗೆ ವರ್ಗಾವಣೆ ಮಾಡುವ ಪ್ರಸ್ತಾವನೆ ಯಾವ ಹಂತದಲ್ಲಿದೆ ; ಬಾಳೆಪುಣೆಯಲ್ಲಿ ನೂತನ ಕಾರಾಗೃಹ ಕಟ್ಟಡ ನಿರ್ಮಾಣ ಕಾಮಗಾರಿ ಯಾವ ಹಂತದಲ್ಲಿದೆ ; ಇದಕ್ಕಾಗಿ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ ; ಕಾಮಗಾರಿ ಪೂರ್ಣಗೊಳ್ಳುವುದು ಯಾವಾಗ ; ಸ್ಥಳಾಂತರಗೊಳಿಸಲು ದಿನಾಂಕವನ್ನು ಗೊತ್ತುಪಡಿಸಲಾಗಿದೆಯೇ ; (ವಿವರ ನೀಡುವುದು)

(ಆ) ಮಂಗಳೂರು ಜಿಲ್ಲಾ ಕಾರಾಗೃಹದ ದಾರಿಯಲ್ಲಿ ಹೋಗುವವರು ಮಾದಕ ದ್ರವ್ಯ, ಮೊಬೈಲ್ ಫೋನ್‌ಗಳನ್ನು ರಸ್ತೆಯಿಂದ ಕಾರಾಗೃಹಕ್ಕೆ ಎಸೆದ ಬಗ್ಗೆ ಮತ್ತು ಕಾರಾಗೃಹದಲ್ಲಿ ಯಥೇಚ್ಛವಾಗಿ ಮಾದಕ ದ್ರವ್ಯ ಮತ್ತು ಮೊಬೈಲ್ ಫೋನ್ ಬಳಕೆಯಿಂದ ಗುಂಪು ಘರ್ಷಣೆ ನಡೆಯುತ್ತಿದ್ದು, ನಿಯಂತ್ರಣಕ್ಕೆ ಯಾವ ಕ್ರಮಕೈಗೊಳ್ಳಲಾಗಿದೆ ;

(ಇ) ಪ್ರಸ್ತುತ ಕಾರಾಗೃಹದಲ್ಲಿರುವ ಕೈದಿಗಳ ಸಂಖ್ಯೆ ಎಷ್ಟು ; ಎಷ್ಟು ಮಂದಿ ಕೈದಿಗಳಿಗೆ ಸ್ಥಳಾವಕಾಶದ ಲಭ್ಯತೆ ಇರುತ್ತದೆ ; (ವಿವರ ನೀಡುವುದು)

(ಈ) ಇತ್ತೀಚೆಗೆ ಕಾರಾಗೃಹದಲ್ಲಿ ೪೫ ಮಂದಿ ಕೈದಿಗಳು ಫುಡ್ ಪಾಯ್ಸನ್‌ದಿಂದ ಅಸ್ವಸ್ಥಗೊಳ್ಳಲು ಕಾರಣಗಳೇನು ; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಉ) ಕಾರಾಗೃಹದಲ್ಲಿ ಧರ್ಮದ ಆಧಾರದಲ್ಲಿ ಕೈದಿಗಳಿಗೆ ವಿಭಾಗವನ್ನು ಮಾಡಿ, ಆಯಾ ಧರ್ಮದ ಹೆಸರಿನಲ್ಲಿ ಕೈದಿಗಳನ್ನು ಇರಿಸಲಾಗಿದೆ ಎಂಬ ವರದಿ ನಿಜವೇ ? (ಈ ಬಗ್ಗೆ ವಿವರ ನೀಡುವುದು)

## ಸರ್ಕಾರಿ ರಜಾ ದಿನಗಳಂದು ಕಬ್ಬನ್ ಉದ್ಯಾನವನ ಬಂದ್ ಮಾಡುವುದರಿಂದ ಉಂಟಾಗುತ್ತಿರುವ ತೊಂದರೆಗಳ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೬೮ (೧೩೯೪) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿನ ಹೃದಯ ಭಾಗದಲ್ಲಿರುವ ಕಬ್ಬನ್ ಉದ್ಯಾನವನವನ್ನು ಯಾವ ಯಾವ ದಿನಗಳಂದು ಸಾರ್ವಜನಿಕರ ಸಂಚಾರಕ್ಕೆ ತೆರೆಯಲಾಗುತ್ತಿದೆ ; ಹಾಗೂ ಯಾವ ಯಾವ ದಿನಗಳಂದು ಪ್ರವೇಶ ಬಂದ್ ಮಾಡಲಾಗುತ್ತಿದೆ ; (ವಿವರಗಳನ್ನು (with timings) ಒದಗಿಸುವುದು)

(ಆ) ಕಬ್ಬನ್ ಉದ್ಯಾನವನಕ್ಕೆ ರಜಾ ದಿನಗಳಂದು ಪ್ರವೇಶ ಬಂದ್ ಮಾಡುವುದರಿಂದ ಸಾರ್ವಜನಿಕರ ಹಾಗೂ ವಾಹನಗಳ ಸುಗಮ ಸಂಚಾರಕ್ಕೆ, ಆಂಬ್ಯುಲೆನ್ಸ್ ವಾಹನಗಳ ಓಡಾಟಕ್ಕೆ, ವಿಮಾನ ನಿಲ್ದಾಣ

ಹಾಗೂ ಆಸ್ಪತ್ರೆಗಳಿಗೆ ತುರ್ತಾಗಿ ಹೋಗುವವರಿಗೆ ತೊಂದರೆಯಾಗುತ್ತಿದೆಯೆಂದು ದೂರುಗಳು ಕೇಳಿ ಬರುತ್ತಿದ್ದು, ಅವುಗಳ ನಿವಾರಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರಗಳನ್ನು ನೀಡುವುದು)

## ಹೊಸಕೋಟೆ ತಾಲ್ಲೂಕಿನ ಸುತ್ತಮುತ್ತಲಿನ ಗ್ರಾಮಗಳಲ್ಲಿ ರಕ್ತಚಂದನ ಮರಗಳ ಕಳ್ಳ ಸಾಗಾಣಿಕೆ ಕುರಿತು

**ಶ್ರೀ ಎನ್. ನಾಗರಾಜು (ಎಂ.ಟಿ.ಬಿ) (ವಿಧಾನಸಭೆಯಿಂದ ಚುನಾಯಿತರಾದವರು) –**

೧೬೯ (೧೪೨೬) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹೊಸಕೋಟೆ ತಾಲ್ಲೂಕಿನ ಕಟ್ಟಿಗೇನಹಳ್ಳಿ, ಬೈಲನರಸಾಪುರ, ಮೇಡಿಮಲ್ಲಸಂದ್ರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಅಕ್ರಮವಾಗಿ ರಕ್ತಚಂದನ ಮರಗಳ ಸಾಗಾಣಿಕೆ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಇದನ್ನು ತಡೆಗಟ್ಟಲು ಕೈಗೊಂಡಿರುವ ಕ್ರಮಗಳೇನು ;

(ಇ) ಹೊರ ರಾಜ್ಯದ ಪೊಲೀಸರು ದಾಳಿ ಮಾಡಿ ರಕ್ತಚಂದನ ಮರಗಳನ್ನು ವಶಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ನಮ್ಮ ರಾಜ್ಯದ ಪೊಲೀಸರು ದಾಳಿ ಮಾಡಿ ರಕ್ತಚಂದನ ವಶಪಡಿಸಿಕೊಂಡು ಕ್ರಮ ಕೈಗೊಳ್ಳದಿರಲು ಇರುವ ಅಡತಡೆಗಳೇನು ?

## ಕನ್ನಡ ಚಲನಚಿತ್ರಗಳ ನಿರ್ಮಾಣಕ್ಕೆ ಪ್ರೋತ್ಸಾಹಧನ ನೀಡುವ ಬಗ್ಗೆ

**ಡಾ: ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) –**

೧೭೦ (೧೪೬೦) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕನ್ನಡ ಚಲನಚಿತ್ರಗಳ ನಿರ್ಮಾಣಕ್ಕೆ ಪ್ರೋತ್ಸಾಹಧನ (ಸಬ್ಸಿಡಿ) ನೀಡಲಾಗುತ್ತಿದೆಯೇ ;

(ಆ) ಪ್ರತಿ ವರ್ಷಕ್ಕೆ ಎಷ್ಟು ಚಿತ್ರಕ್ಕೆ ಸಬ್ಸಿಡಿ ನೀಡಲಾಗುತ್ತಿದೆ ; ಯಾವ ಯಾವ ರೀತಿಯ ಚಿತ್ರಗಳಿಗೆ ಸಬ್ಸಿಡಿ ನೀಡಲಾಗುತ್ತಿದೆ ; ಸಬ್ಸಿಡಿ ಮೊತ್ತವೆಷ್ಟು ;

(ಇ) ಇಲ್ಲಿಯವರೆಗೆ ಎಷ್ಟು ಚಿತ್ರಗಳಿಗೆ ಸಬ್ಸಿಡಿ ನೀಡಲಾಗಿದೆ ; ಇನ್ನು ಎಷ್ಟು ಚಿತ್ರಗಳಿಗೆ ಸಬ್ಸಿಡಿ ಮೊತ್ತವನ್ನು ನೀಡಬೇಕಾಗಿದೆ ;

(ಈ) ಸಬ್ಸಿಡಿ ಮೊತ್ತವನ್ನು ಹೆಚ್ಚಿಸುವ ಚಿಂತನೆ ಸರ್ಕಾರದ ಮುಂದಿದೆಯೇ ?

## ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಯ ಸಣ್ಣ ಕೆರೆಗಳ ಅಭಿವೃದ್ಧಿ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) –**

೧೭೧ (೧೪೪೯) ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಮತ್ತು ಧಾರವಾಡ ಜಿಲ್ಲೆಯಲ್ಲಿ ಒಟ್ಟು ಎಷ್ಟು ಸಣ್ಣ ಕೆರೆಗಳಿವೆ ; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಆ) ದುರಸ್ತಿಯಲ್ಲಿರುವ ಸಣ್ಣ ಕೆರೆ ಕಟ್ಟೆಗಳು ಯಾವುವು ;

(ಇ) ೨೦೨೪–೨೫ನೇ ಸಾಲಿನಲ್ಲಿ ಸಣ್ಣ ಕೆರೆಗಳನ್ನು ಅಭಿವೃದ್ಧಿ ಮಾಡಲು ಸರ್ಕಾರ ಬಿಡುಗಡೆ ಮಾಡಿರುವ ಮತ್ತು ವಿನಿಯೋಗಿಸಿರುವ ಅನುದಾನವೆಷ್ಟು ? (ಮಾಹಿತಿ ನೀಡುವುದು)

## ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಯೋಜನೆ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) –**

೧೭೨ (೧೪೧೪) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನೈಸ್ ಕಂಪನಿಯ ಬಹುವಿವಾದಿತ ಬೆಂಗಳೂರು–ಮೈಸೂರು ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ (ಬಿಎಂಐಸಿಪಿ) ಯೋಜನೆಯನ್ನು ರಾಜ್ಯ ಸರ್ಕಾರ ಸ್ವಾಧೀನಕ್ಕೆ ತೆಗೆದುಕೊಳ್ಳುವ ಕಾನೂನು ಪ್ರಕ್ರಿಯೆಯನ್ನು ಆರಂಭಿಸಲಾಗುವುದೆಂದು ದಿನಾಂಕ ೦೩–೦೭–೨೦೨೪ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ವರದಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸರ್ಕಾರದ ನಿಲುವೇನು ; ಸರ್ಕಾರ ಇಲ್ಲಿಯ ತನಕ ತೆಗೆದುಕೊಂಡಿರುವ ಕ್ರಮಗಳೇನು ; (ವಿವರ ನೀಡುವುದು)

(ಇ) ಭೂಸ್ವಾಧೀನದ ತಕರಾರು ಸೇರಿ ಯೋಜನೆಯ ವಿರುದ್ಧದ ೮ಂಕ್ಕೂ ಹೆಚ್ಚು ಪ್ರಕರಣಗಳನ್ನು ಒಟ್ಟುಗೂಡಿಸಿ ಒಂದೇ ನ್ಯಾಯಪೀಠದ ಮುಂದೆ ವಿಚಾರಣೆಗೆ ತಂದು ತ್ವರಿತ ಇತ್ಯರ್ಥಕ್ಕೆ ಕ್ರಮ ವಹಿಸಲಾಗುವುದೆಂದು ಹೇಳಿಕೆ ನೀಡಿರುವುದನ್ನು ಸರ್ಕಾರ ಗಮನಿಸಿದೆಯೇ ;

(ಈ) ಹಾಗಿದ್ದಲ್ಲಿ, ಬಗ್ಗೆ ಸರ್ಕಾರ ಇಲ್ಲಿಯ ತನಕ ನ್ಯಾಯಾಲಯದ ತ್ವರಿತ ಇತ್ಯರ್ಥಕ್ಕೆ ಯಾವ ಯಾವ ರೀತಿಯ ಕ್ರಮಗಳನ್ನು ತೆಗೆದುಕೊಂಡಿದೆ ; (ವಿವರ ನೀಡುವುದು)

(ಉ) ಜಮೀನನ್ನು ಹಿಂದಿರುಗಿಸುವ ಬಗ್ಗೆ ಮಾನ್ಯ ಉಚ್ಚ ನ್ಯಾಯಾಲಯದ ತೀರ್ಪಿನಂತೆ ಸಚಿವ ಸಂಪುಟದ ಉಪ ಸಮಿತಿಯನ್ನು ರಚನೆ ಮಾಡಲಾಗಿತ್ತೇ ; ಹಾಗಿದ್ದಲ್ಲಿ, ಸಚಿವ ಸಂಪುಟ ಉಪ ಸಮಿತಿಯ ಶಿಫಾರಸ್ಸುಗಳೇನು ; (ವಿವರ ನೀಡುವುದು)

(ಊ) ಕೆ.ಐ.ಎ.ಡಿ.ಬಿ. ಕಾಯ್ದೆ ಸೆಕ್ಷನ್ ೩(೧)ರಡಿ ಅಧಿಸೂಚನೆಯಾದರೂ ಸೆಕ್ಷನ್ ೨೮(೪)ರಡಿ ಅಧಿಸೂಚನೆಯಾಗಿರುವ ಭೂಮಾಲೀಕ ರೈತರನ್ನು ಅತಂತ್ರ ಸ್ಥಿತಿಯಲ್ಲಿಟ್ಟಿದ್ದು, ಇವರಿಗೆ ಈಗಿನ ಮಾರುಕಟ್ಟೆ ದರದಲ್ಲಿ ಪರಿಹಾರ ನೀಡಲಾಗುವುದೇ ; (ವಿವರ ನೀಡುವುದು)

(ಋ) ಇಲ್ಲವಾದಲ್ಲಿ, ಉಳಿದ ಭೂಮಿ ಹಾಗೆ ಇರುವುದರಿಂದ ಈ ಭೂಮಿಯನ್ನು ರೈತರಿಗೆ ಹಿಂದಿರುಗಿಸಲಾಗುವುದೇ ? (ತಿಳಿಸುವುದು)

## ರಾಜ್ಯದಲ್ಲಿ ಶರಣಾಗತರಾದ ನಕ್ಸಲರಿಗೆ ನೀಡಿರುವ ಪ್ಯಾಕೇಜ್ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) –**

೧೭೩ (೧೪೯೧) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ನಕ್ಸಲ್ ಚಟುವಟಿಕೆಗಳನ್ನು ಹತ್ತಿಕ್ಕಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; ನಕ್ಸಲ್ ನಿಗ್ರಹಕ್ಕಾಗಿ ಎಷ್ಟು ವೆಚ್ಚವಾಗಿದೆ ;

(ಆ) ನಕ್ಸಲರು ಶರಣಾಗಲು ಹಾಕಿದ್ದ ಷರತ್ತುಗಳೇನು ; ಎಷ್ಟು ಷರತ್ತುಗಳಿಗೆ ಸರ್ಕಾರ ಒಪ್ಪಿಗೆ ನೀಡಿದೆ ; (ಈವರೆಗೆ ಶರಣಾಗತರಾಗಿರುವ ನಕ್ಸಲರ ಹೆಸರು ಸಹಿತ ವಿವರ ಒದಗಿಸುವುದು)

(ಇ) ಶರಣಾಗತರಾಗಿರುವ ನಕ್ಸಲರಿಗೆ ಸರ್ಕಾರ ಪ್ಯಾಕೇಜ್ ಘೋಷಿಸಿದೆಯೇ ; ಪ್ಯಾಕೇಜ್ ಘೋಷಣೆಗೆ ಸರ್ಕಾರ ಅನುಸರಿಸಿರುವ ಮಾನದಂಡಗಳೇನು ; (ವಿವರ ನೀಡುವುದು)

(ಈ) ಶರಣಾಗತರಾದ ನಕ್ಸಲರು ಬಳಸುತ್ತಿದ್ದ ಎಲ್ಲಾ ರೀತಿಯ ಶಸ್ತ್ರಗಳನ್ನು ಸರ್ಕಾರ ವಶಪಡಿಸಿಕೊಂಡಿದೆಯೇ ;

(ಉ) ಇನ್ನುಳಿದ ನಕ್ಸಲರನ್ನು ಪತ್ತೆ ಹಚ್ಚಲು ಸರ್ಕಾರ ಯಾವ ಕ್ರಮಕೈಗೊಂಡಿದೆ; ರಾಜ್ಯವನ್ನು ಈಗ ನಕ್ಸಲ್ ಮುಕ್ತ ರಾಜ್ಯ ಎಂದು ಸರ್ಕಾರ ಘೋಷಣೆ ಮಾಡುವುದೇ ?

## ನಿಜಶರಣ ಅಂಬಿಗರ ಚೌಡಯ್ಯನವರ ಐಕ್ಯ ಸ್ಥಳ ಅಭಿವೃದ್ಧಿ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) –**

೧೭೪ (೧೪೪೮) ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾವೇರಿ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿನ ಚೌಡಯ್ಯದಾನಪುರ ಶ್ರೀ ನಿಜಶರಣ ಅಂಬಿಗರ ಚೌಡಯ್ಯನವರ ಕಾಯಕ ಕ್ಷೇತ್ರ ಹಾಗೂ ಐಕ್ಯ ಸ್ಥಳ ತುಂಗಭದ್ರ ನದಿಯ ದಡದಲ್ಲಿರುವುದು ನಿಜವೇ ;

(ಆ) ಅಂಬಿಗರ ಚೌಡಯ್ಯನವರ ಸಮಾಧಿಯ ಗದ್ದುಗೆಯನ್ನು ಕೂಡಲಸಂಗಮ ಬಸವಣ್ಣನವರ ಗದ್ದುಗೆಯನ್ನು ಕಟ್ಟಿದ ಮಾದರಿಯಲ್ಲಿ ನಿರ್ಮಾಣ ಮಾಡಿ ಜನರಿಗೆ ಪ್ರದರ್ಶನ ಪಡೆಯಲು ಅನುಕೂಲ ಮಾಡುವ ಬಗ್ಗೆ ಸಾರ್ವಜನಿಕರಿಂದ ಒತ್ತಡ ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಈ ಪ್ರದೇಶ ಭಾರತೀಯ ಪುರಾತತ್ವ ಸರ್ವೇಕ್ಷಣೆಯ ವ್ಯಾಪ್ತಿಗೆ ಬರುತ್ತಿರುವುದು ಪುರಾತತ್ವ ಇಲಾಖೆಯ ಅನುಮತಿಯನ್ನು ಪಡೆಯಲು ಎಷ್ಟು ಬಾರಿ ಪತ್ರ ಬರೆಯಲಾಗಿದೆ ; (ಮಾಹಿತಿ ಒದಗಿಸುವುದು)

(ಈ) ಇದುವರೆವಿಗೆ ಕೇಂದ್ರದ ಮೇಲೆ ಒತ್ತಡ ತರುವ ಪ್ರಯತ್ನ ಸರ್ಕಾರ ಮಾಡದೇ ಇದ್ದ ಪಕ್ಷದಲ್ಲಿ ಕೇಂದ್ರ ಸಂಸ್ಕೃತಿ ಮಂತ್ರಾಲಯದ ಅಧೀನದಲ್ಲಿರುವ ಭಾರತೀಯ ಪುರಾತತ್ವ ಸರ್ವೇಕ್ಷಣೆ ಇಲಾಖೆಗೆ ಅಧಿಕಾರಿಗಳಿಗೆ ಖುದ್ದು ಭೇಟಿ ಮಾಡುವ ಮೂಲಕ ಅಥವಾ ನಿಯೋಗವೊಂದನ್ನು ತೆಗೆದುಕೊಂಡು ಹೋಗುವ ಮೂಲಕ ಒತ್ತಡ ತಂದು ಅನುಮತಿ ಪಡೆದು ಅಂಬಿಗರ ಚೌಡಯ್ಯನವರ ಸಮಾಧಿ ಗದ್ದುಗೆ ನಿರ್ಮಾಣ ಮಾಡಲು ಕ್ರಮವಹಿಸಲಾಗುವುದೇ ?

## ವಾರಾಹಿ ಯೋಜನೆ ಪೂರ್ಣಗೊಳಿಸುವ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೭೫ (೧೪೪೦) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವಾರಾಹಿ ಯೋಜನೆ ಎಷ್ಟು ತಾಲ್ಲೂಕುಗಳಿಗೆ ಯಾವ ಪ್ರಮಾಣದ ಕುಡಿಯುವ ನೀರನ್ನು ಪೂರೈಕೆ ಮಾಡುತ್ತಿದೆ ; (ಮಾಹಿತಿ ನೀಡುವುದು)

(ಆ) ಈ ಯೋಜನೆ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಯಿತು ; ಯಾವಾಗ ಪೂರ್ಣಗೊಳಿಸಲಾಗುವುದು ; ಪೂರ್ಣಗೊಳಿಸಲು ಇರುವ ಸಮಸ್ಯೆಗಳೇನು ; (ಮಾಹಿತಿ ನೀಡುವುದು)

(ಇ) ವಾರಾಹಿ ಯೋಜನೆ ಎಷ್ಟು ಕಿಲೋಮೀಟರುಗಳ ಉದ್ದದ ನೀರಾವರಿ ಕಾಲುವೆ ಆಗಿರುತ್ತದೆ; ಸದರಿ ಕಾಮಗಾರಿಯಲ್ಲಿ ಒಟ್ಟು ಎಷ್ಟು ಕಿ.ಮೀ. ವರೆಗೆ ನೀರು ಹರಿಸಲಾಗಿದೆ ಹಾಗೂ ಕಾಲುವೆಗಳ ಕಾಮಗಾರಿ ಅರ್ಧದಲ್ಲಿ ಬಾಕಿ ಉಳಿಯಲು ಕಾರಣವೇನು ; (ಈ ಬಗ್ಗೆ ಸಂಪೂರ್ಣ ವಿವರ ನೀಡುವುದು)

(ಈ) ೧೯೯೯ ರಿಂದ ೨೦೨೪ರವರೆಗೆ ವಾರಾಹಿ ಯೋಜನೆಗೆ ನೀರಾವರಿ ನಿಗಮದಿಂದ ಇಲ್ಲಿಯವರೆಗೆ ಖರ್ಚು ಮಾಡಲಾದ ಒಟ್ಟು ಮೊತ್ತ ಎಷ್ಟು ;

ಯಾವ ಯಾವ ಯೋಜನೆಗಳಿಗೆ ಎಷ್ಟು ಮೊತ್ತ ಖರ್ಚು ಮಾಡಲಾಗಿದೆ ; (ಈ ಬಗ್ಗೆ ಸಂಪೂರ್ಣ ವಿವರ ನೀಡುವುದು)

(ಉ) ವಾರಾಹಿ ಯೋಜನೆ ಹೆಸರಿನಲ್ಲಿ ಕರ್ನಾಟಕ ನೀರಾವರಿ ನಿಗಮವು ದಕ್ಷಿಣ ಕನ್ನಡ ಜಿಲ್ಲೆಯ ಯಾವ ತಾಲ್ಲೂಕುಗಳಲ್ಲಿ ಯಾವ ಯಾವ ಕಾಮಗಾರಿಗೆ ಹಣವನ್ನು ನೀಡಿದೆ ;

(ಊ) ವಾರಾಹಿ ಯೋಜನೆಯ ಯಾವ ಕಾಲುವೆಗಳ ಕಾಮಗಾರಿಗೆ ಅರಣ್ಯ ಇಲಾಖೆಯ ಅನುಮತಿ ಅಗತ್ಯವಿರುತ್ತದೆ ; ಅರ್ಧದಲ್ಲಿ ನಿಂತಿರುವ ಕಾಮಗಾರಿಗಳಾವುವು ಮತ್ತು ಸದರಿ ಯೋಜನೆಗೆ ಸಂಬಂಧಿಸಿದ ಲ್ಯಾಂಡ್ಸ್ ಸರ್ವೆ ಅಗತ್ಯವಿದೆಯೇ ? (ವಿವರವನ್ನು ನೀಡುವುದು)

## ರಾಯಚೂರು ಜಿಲ್ಲೆಯ ಎರಮರಸ್ ಉಷ್ಣ ವಿದ್ಯುತ್ ಸ್ಥಾವರದ ನಿರ್ವಹಣೆ ಕುರಿತು (YTPCL)

**ಶ್ರೀ ಎ. ವಸಂತ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೭೬ (೧೪೯೪) ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯ ರಾಯಚೂರು ತಾಲ್ಲೂಕಿನಲ್ಲಿರುವ ಎರಮರಸ್ ಉಷ್ಣ ವಿದ್ಯುತ್ ಸ್ಥಾವರದ ನಿರ್ವಹಣೆಗಾಗಿ ಟೆಂಡರ್ ಕರೆದು ಹೈದರಾಬಾದ್‌ನ ಪವರ್ ಮ್ಯಾಕ್ ಕಂಪನಿಗೆ ವಹಿಸಿಕೊಡಲಾಗಿರುವುದು ನಿಜವೇ ; ಕಂಪನಿಯು ಹೊರಗುತ್ತಿಗೆ ಆಧಾರದ ಮೇಲೆ ಟೆಕ್ನಿಕಲ್ ಮತ್ತು ನಾನ್ ಟೆಕ್ನಿಕಲ್ ಹುದ್ದೆಗಳಿಗೆ ನೇಮಕಾತಿಯನ್ನು ಮಾಡಿಕೊಂಡಿರುವ ಸಂದರ್ಭದಲ್ಲಿ ಸರ್ಕಾರದ ನೂತನ (ಸಿಆಸುಇ ೦೬ ೨೦೨೪) ಆದೇಶದನ್ವಯ ಮೀಸಲಾತಿ ನಿಯಮವನ್ನು ಪಾಲಿಸಲಾಗಿದೆಯೇ ; (ಮಾಹಿತಿ ನೀಡುವುದು)

(ಆ) ಈ ಹುದ್ದೆಗಳಿಗೆ ನೇಮಕಾತಿಯನ್ನು ೩೭೧(ಜೆ) ಕಲಂ ನಿಯಮದಡಿ ಮಾಡಲಾಗಿದೆಯೇ ;

(ಇ) ೩೭೧(ಜೆ) ಕಲಂ ನಿಯಮದ ಪ್ರಕಾರ ನೇಮಕಾತಿಯಲ್ಲಿ ಸ್ಥಳೀಯರಿಗೆ ಸಮೂಹ ಎ ಮತ್ತು ಸಮೂಹ ಬಿ ಹುದ್ದೆಗಳಿಗೆ ಶೇಕಡಾ ೭೫ರಷ್ಟು ಸಮೂಹ ಸಿ ಹುದ್ದೆಗಳಿಗೆ ಶೇಕಡ ೮೦ರಷ್ಟು ಹಾಗೂ ಸಮೂಹ ಡಿ

ಹುದ್ದೆಗಳಿಗೆ ಶೇಕಡಾ ೮೫ರಷ್ಟು ಮೀಸಲಾತಿಯನ್ನು ನೀಡಲಾಗಿದೆಯೇ ; ನೀಡದಿದ್ದಲ್ಲಿ, ಸ್ಥಳೀಯರಿಗೆ ಅನ್ಯಾಯವಾಗದಂತೆ ಇದನ್ನು ಸರಿಪಡಿಸಲು ಸರ್ಕಾರ ಕೈಗೊಳ್ಳುವ ಕ್ರಮವೇನು ;

(ಈ) ನೇಮಕಾತಿಯಲ್ಲಿರುವ ಒಟ್ಟು ಟೆಕ್ನಿಕಲ್ ಹಾಗೂ ನಾನ್ ಟೆಕ್ನಿಕಲ್ ಹುದ್ದೆಗಳೆಷ್ಟು ? (ಸಂಪೂರ್ಣ ಮಾಹಿತಿ ನೀಡುವುದು)

## ಮೈಸೂರು ಜಿಲ್ಲೆ, ಹುಣಸೂರು ನಗರದಲ್ಲಿ ಹಾದು ಹೋಗುವ ಲಕ್ಷ್ಮಣ ತೀರ್ಥ ನದಿ ಕುರಿತು

**ಡಾ: ಡಿ. ತಿಮ್ಮಯ್ಯ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೭೭ (೧೪೨೦) ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಜಿಲ್ಲೆ, ಹುಣಸೂರು ನಗರದಲ್ಲಿ ಹಾಯ್ದು ಹೋಗುವ ಲಕ್ಷ್ಮಣ ತೀರ್ಥ ನದಿಯ ನೀರು ಹರಿಯದೆ ಅಲ್ಲಿಯೇ ನಿಂತು ಕಲುಷಿತಗೊಂಡು ಗಿಡಗಳು ಬೆಳೆದಿರುವುದಲ್ಲದೆ, ಕ್ರಿಮಿ–ಕೀಟಗಳಿಂದ ಕಲುಷಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ನದಿಯ ನೀರು ಸಾರ್ವಜನಿಕರು ಕುಡಿಯಲು ಯೋಗ್ಯವಾಗಿದೆಯೇ; ಯೋಗ್ಯವಾಗಿದ್ದಲ್ಲಿ, ನದಿಯ ನೀರನ್ನು ಯಾವಾಗ ಯಾವ ಅಧಿಕಾರಿಗಳಿಂದ ಪರೀಕ್ಷೆಗೆ ಒಳಪಡಿಸಲಾಗಿತ್ತು ; ಅದರ ವರದಿಯೇನಾದರೂ ಬಂದಿದೆಯೇ ? (ಸಂಪೂರ್ಣ ಮಾಹಿತಿ ನೀಡುವುದು)

## ಬೆಂಗಳೂರಿನ ಬಿ.ಬಿ.ಎಂ.ಪಿ. ವ್ಯಾಪ್ತಿಯಲ್ಲಿನ ಕೆರೆಗಳ ಒತ್ತುವರಿ ಕುರಿತು

**ಶ್ರೀ ಶರವಣ ಟಿ.ಎ. (ವಿಧಾನಸಭೆಯಿಂದ ಚುನಾಯಿತರಾದವರು) –**

೧೭೮ (೧೪೨೩) ಉಪ ಮುಖ್ಯಮಂತ್ರಿಗಳು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರಿನಲ್ಲಿ ಹಲವು ಕೆರೆಗಳು ಅನೇಕ ದಶಕಗಳ ಹಿಂದೆ ಒತ್ತುವರಿಯಾಗಿ ಅಭಿವೃದ್ಧಿಯಾಗಿದ್ದು, ಇಲ್ಲಿ ಇನ್ನೂ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ಇರುವ ನಿಯಮಗಳೇನು ;

(ಆ) ಬೆಂಗಳೂರಿನ ಹಲವು ಕಡೆಗಳಲ್ಲಿ ಕೆರೆಗಳ ಪ್ರದೇಶದಲ್ಲಿ ಸಂಪೂರ್ಣ ಅಭಿವೃದ್ಧಿಯಾಗಿದ್ದು, ಪಕ್ಕದಲ್ಲಿನ ಪ್ರದೇಶಗಳನ್ನು ಕೆರೆ ಬಫರ್ ಝೋನ್ ಎಂದು ಅಭಿವೃದ್ಧಿಪಡಿಸಲು ಸಾಧ್ಯವಿಲ್ಲವೆಂದು ಅಧಿಕಾರಿಗಳು ಹೇಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಕೆರೆ ಇಲ್ಲದ ಮೇಲೆ ಬಫರ್ ಝೋನ್ ಎಂದು ಅಭಿವೃದ್ಧಿಗೆ ಅನುಮತಿ ನಿರಾಕರಿಸಲು ಕಾರಣಗಳೇನು ;

(ಈ) ೧೯೯೦ ರಿಂದ ಇಲ್ಲಿಯವರೆಗೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿ ಸಿ.ಡಿ.ಪಿ. ಪರಿಷ್ಕರಣೆ ಮಾಡಲಾಗಿದೆಯೇ ; ಪರಿಷ್ಕರಣೆ ಮಾಡದಿದ್ದಲ್ಲಿ, ಕಾರಣಗಳೇನು ? (ಸಂಪೂರ್ಣ ವಿವರ ನೀಡುವುದು)

## ಮೈಸೂರು ಪೊಲೀಸ್ ಸಮುದಾಯ ಭವನ ಕುರಿತು

**ಶ್ರೀ ಅಡಗೂರ್ ಹೆಚ್. ವಿಶ್ವನಾಥ್ (ನಾಮನಿರ್ದೇಶನ ಹೊಂದಿದವರು) –**

೧೭೯ (೧೪೨೭) ಗೃಹ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಪೊಲೀಸ್ ಭವನ, ಪೊಲೀಸ್ ವೆಲ್ಫೇರ್ ಟ್ರಸ್ಟ್ (ರಿ)ರವರ ವಿರುದ್ಧ ದಿನಾಂಕ ૩೧–೦૩–೨೦೦೧ ರಿಂದ ದಿನಾಂಕ ૩೧–೦૩–೨೦೨೪ರ ವರೆಗೆ ಆದಾಯ ತೆರಿಗೆ ಇಲಾಖೆ ತೆರಿಗೆ ಬಾಕಿ ಪಾವತಿ ಮಾಡದಿರುವುದರಿಂದ ಇವರುಗಳ ವಿರುದ್ಧ ದಾವೆ ದಾಖಲು ಮಾಡಿರುವ ಬಗ್ಗೆ ಪೂರ್ಣ ಮಾಹಿತಿ ನೀಡುವುದು ;

(ಆ) ಪೊಲೀಸ್ ಭವನ ಹಾಗೂ ವೆಲ್ಫೇರ್ ಟ್ರಸ್ಟ್‌ಗಳು ಎಷ್ಟು ತೆರಿಗೆ ಹಣ ತುಂಬಬೇಕು ಎಂದು ನೀಡಿರುವ ನೋಟೀಸ್‌ನ ಮಾಹಿತಿ ಹಾಗೂ ಪೊಲೀಸ್ ಆಯುಕ್ತರುಗಳ ಅವಧಿಯಲ್ಲಿ ತೆರಿಗೆ, ಜಿ.ಎಸ್.ಟಿ. ತುಂಬದೆ

ನಿರ್ಲಕ್ಷ್ಯ ವಹಿಸಿದ ಅಧಿಕಾರಿಗಳು ಯಾರು ; (ಪೂರ್ಣ ವಿವರ ನೀಡುವುದು)

(ಇ) ಆದಾಯ ತೆರಿಗೆ ಇಲಾಖೆಗೆ ಜಿ.ಎಸ್.ಟಿ. ಬಾಕಿ ಕಟ್ಟದೆ ಇರುವ ಬಗ್ಗೆ ಟ್ರಸ್ಟ್ (ರಿ) ಹೂಡಿರುವ ದಾವೆ ಸದ್ಯ ಯಾವ ಹಂತದಲ್ಲಿದೆ, ಎಷ್ಟು ಹಣ ತುಂಬಬೇಕು ; ಆ ದಾವೆಗಳಿಗೆ ಹಾಕಿರುವ ತಕರಾರು ಪ್ರತಿ ಹಾಗೂ ಸಂಪೂರ್ಣ ದಾಖಲೆಗಳನ್ನು ಒದಗಿಸುವುದು ;

(ಈ) ಆದಾಯ ತೆರಿಗೆ ಇಲಾಖೆ ಬಾಕಿ ಕಟ್ಟಲು ಮೈಸೂರು ನಗರ ಪೊಲೀಸ್ ಸಿಬ್ಬಂದಿಗಳು ಹಾಗೂ ಅಧಿಕಾರಿಗಳಿಂದ (ಪ್ರತಿ ಸದಸ್ಯರುಗಳಿಂದ) ವಂತಿಕೆ ರೂಪದಲ್ಲಿ ಹಣವನ್ನು ತಿಂಗಳ ಸಂಬಳದಿಂದ ಕಟಾವು ಮಾಡಲಾಗಿದೆಯೇ; ಯಾವ ಯಾವ ಮೂಲಗಳಿಂದ ಹಣ ವಸೂಲಿ ಮಾಡಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಉ) ಮೈಸೂರು ಪೊಲೀಸ್ ಸಮುದಾಯ ಭವನ ಕಟ್ಟಲು ಮೈಸೂರು ಮಹಾನಗರ ಪಾಲಿಕೆಯಿಂದ ನಕ್ಷೆ ಅನುಮೋದನೆ ಹಾಗೂ ಅಗ್ನಿಶಾಮಕ ಇಲಾಖೆಯಿಂದ ಪರವಾನಗಿ ಪಡೆಯಲಾಗಿದೆಯೇ ?

## ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಉಪವಿಭಾಗ ತೆರೆಯುವ ಕುರಿತು

**ಡಾ. ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) –**

೧೮೦ (೧೪೨೯) ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ವರುಣ ವಿಧಾನ ಸಭಾ ಕ್ಷೇತ್ರವು ಶೇಕಡಾ ೯೦ರಷ್ಟು ಗ್ರಾಮೀಣ ಪ್ರದೇಶವನ್ನು ಹೊಂದಿದ್ದು ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆಯಿಂದ ಹೊಸದಾಗಿ ಸಣ್ಣ ನೀರಾವರಿ ಮತ್ತು ಅಂತರ್ಜಲ

ಅಭಿವೃದ್ಧಿ ಉಪ ವಿಭಾಗ ಟಿ.ನರಸೀಪುರ/ವರುಣ ಕಛೇರಿಯನ್ನು ತೆರೆಯುವ ಅವಶ್ಯಕತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಟಿ. ನರಸೀಪುರದಲ್ಲಿ ಸದರಿ ಕಛೇರಿಯನ್ನು ಪ್ರಾರಂಭಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಇ) ಹಾಗಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು ?

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

**List of Questions for Oral Answers**

**Total No. of Questions - 15**

# LIST - 12

# KARNATAKA LEGISLATIVE COUNCIL

## ONE HUNDRED AND FIFTY FIFTH SESSION

## Thursday, the 20th March, 2025

---

### GROUP - IV

1. Chief Minister
2. Deputy Chief Minister
3. Minister for Home
4. Minister for Law, Parliamentary Affairs and Legislation and Tourism
5. Minister for Excise
6. Minister for Minor Irrigation, Science and Technology.

---

### FINANCIAL PRIORITY FOR UPPER KRISHNA PROJECT

**Sri. P.H.Pujar (Local Authorities Constituency) -**

**166 (1474) Will the Chief Minister be pleased to state :-**

a) since the proposal of land acquisition in a single phase for 524.256 meter for the lands that will be submerged in phase-3 of Upper Krishna Project has been declared by the Government in para 94 of the budget during the year 2025-2026, whether the compensation would be provided without cancelling and by continuing the existing cases which are already under land acquisition process of lands which are in the limit of 522 FRL feet ; (information be furnished)

b) whether the compensation would be provided as per the consent award of Rs. 50 lakh for the irrigation lands and Rs 40 lakh for dry lands as discussed in the meeting held with the concerned officers, the farmers of submerged area and representatives in the month of December 2024 in Belagavi ; if not, the details of price which has been decided in the consent award ; (information be furnished)

c) the amount that has been earmarked for land acquisition and rehabilitation programmes of the project during the current year ; (information be furnished)

d) the present revised estimate cost required to complete the project ?

**SHIFTING OF DISTRICT PRISON**

**Sri Ivan D'Souza (Elected by Legislative Assembly) -**

**167 (1387) Will the Minister for Home be pleased to state :-**

a) the present stage of the the proposal of shifting the District Prison of Mangaluru City to Balepuni of Bantwala taluk ; the present stage of the construction work of the new prison building in Balepuni ; the amount that has been released for the same ; the date on which the work would be completed ; whether the date has been fixed for shifting ; (details be furnished)

b) with regard to people passing in the way of Mangaluru district prison are throwing drugs and mobile phones into the prison and the group fights which are being occurred because of using drugs and mobile phones extensively in the prison ; the step has been taken to prevent the same ;

c) the number of prisoners in the prison at present ; the number of prisoners to whom the space has been availed ; (details be furnished)

d) the reasons for 45 prisoners who suffered from food poisoning recently in the prison ; the steps taken by the Government in this regard ; (details be furnished)

e) whether the report is true that the prisoners are placed in the name of respective religion by dividing the prisoners on the basis of religion in the prison ? (in this regard details be furnished )

**REGARDING CUBBON PARK**

**Sri D.S Arun (Local Authorities Constituency) -**

168 (1394) Will the Deputy Chief Minister be pleased to state :-

a) the particulars of days on which the Cubbon Park is being opened for public which is located in the heart of Bengaluru city ; the particular of days on which the entry is being closed ; (details with timings be furnished)

b) the complaints are being heard that the hardship is being caused to public and for the smooth movement of vehicles, movement of ambulances and for the persons who are going to the airport and hospitals in emergencies due to the entry of cubbon park has been closed on holidays, the steps taken by the Government to resolve the same ? (details be furnished)

**SMUGGLING OF RED SANDERS IN THE SURROUNDING VILLAGES OF HOSKOTE TALUK**

**Sri N. Nagaraju (M.T.B.) (Elected by Legislative Assembly) -**

169 (1426) Will the Minister for Home be pleased to state :-

a) whether it has come to the notice of the Government that the red sanders are being transported illegally in Kattigena halli, Bylanarasapura, Medimallasandra and surrounding villages of Hoskote taluk ;

b) if so, the measures taken by the Government to prevent the same ;

c) whether it has come to the notice of the Government that the red sanders are being seized by the police of other states ;

d) if so, the prevailing obstacles for not taken any action by the police of Our State for the same ?

**SUBSIDY TO PRODUCTION OF KANNADA FILMS**

**Dr.Umashree (Nominated) -**

170 (1460) Will the Chief Minister be pleased to state:-

a) whether the subsidy is being provided to the production of Kannada films ;

b) the number of films for which the subsidy is being provided every year ; the kinds of films for which the subsidy is being provided ; the amount of subsidy for the same ;

c) the number of films for which the subsidy has been provided till date; the number of films for which the subsidy amount yet to be provided ;

d) the contemplation is before the Government to enhance the subsidy amount ?

**DEVELOPMENT OF MINOR LAKES IN UTTARA KANNADA AND DHARWAD DISTRICTS**

**Sri Shantharama Budna Siddi (Nominated) -**

171 (1489) Will the Minister for Minor Irrigation, Science and Technology be pleased to state:-

a) the total number of minor lakes in Uttara Kannada and Dharwad districts ; (talukwise information be furnished)

b) the particulars of minor lakes and ponds which are under repair ;

c) the grant that has been released and spent for the development of minor lakes during the year 2024-25 ? (information be furnished)

**REGRARDING BENGALURU-MYSURU INFRASTRUCTURE CORRIDOR**

**Sri. T.N.Javarayi Gowda (Elected by Legislative Assembly) -**

172 (1414) Will the Deputy Chief Minister be pleased to state:-

a) whether it has come to the notice of the Government that it has been reported in Vijaya Karnataka Paper on 03.07.2024 that the legal process of taking over the possession of the multi disputed Bengaluru-Mysuru Infrastructure Corridor (BMIC) Project of NICE company of Bengaluru would be commenced by the State Government ;

b) if so, the stand of the Government; the steps taken by the Government till date ; (details be furnished)

c) whether the Government has noticed the statement that has been given that the step would be taken to the rapid settlement of more than 80 cases against the project including dispute of land acquisition by bringing the trial all together before the same bench ;

d) if so, the kinds of steps that have been taken by the Government for the rapid settlement by the court till date in this regard ; (details be furnished)

e) whether the cabinet sub-committee has been constituted as per the judgement of Hon'ble High Court with regard to return the land ; if so, the recommendations of the cabinet sub committee ; (details be furnished)

f) eventhough the notification has been issued under Section 3(1) of K.I.A.D.B Act the land owners notified under Section 28(4), are kept in unhardened State, whether the compensation would be provided in the existing market price for them ; (details be furnished)

g) if not, whether the land would be returned for farmers as the residual land remains the same ? (details be furnished)

**PACKAGES TO SURRENDERED NAXALITES IN THE STATE**

**Sri C.T.Ravi (Elected by Legislative Assembly) -**

173 (1499) Will the Minister for Home be pleased to state:-

a) the steps taken by the Government to prevent the Naxal activities in the State; the amount that has been spent to curb the Naxalism;

b) the conditions that have been placed by the naxals for surrendering ; the number of conditions for which the Government has agreed ; (details alongwith names of naxalities who have surrendered so far be furnished)

c) whether the Government has announced the package for the naxals who have surrendered ; the criterias followed by the Government for announcing the package ; (details be furnished)

d) whether the Government has seized all types of arms which were being used by the surrendered naxals ;

e) the particular of step taken by the Government to trace out the remaining naxalites ; whether the Government would declare the State as naxal free State at present ?

**DEVELOPMENT OF AIKYA STHALA OF NIJASHARANA AMBIGARA CHOWDAIAH**

**Sri. Thippanappa Kamaknoor (Elected by Legislative Assembly) -**

174 (1448) Will the Minister for Law, Parliamentary Affairs and Legislation and Tourism be pleased to state:-

a) whether it is true that the Kayaka Kshetra and Aikya Sthala of Sri Nijasharana Ambigara Chowdaiah of Chowdaiahdanapura of Ranibennur taluk of Haveri district is located in the bank of Tungabhadra river ;

b) whether it has come to the notice of the Government that the pressure has been created by public with regard to making convenience to allowing for Darshanas for people by constructing Gadduge of Samadhi of Ambigara Chowdaiah in the model of Gadduge of Basavanna in the Kudalasangama ;

c) the number of times in which the letter has been written to get the permission of Department of Archaeology due to this area is coming under the limit of Archaeological Survey of India ; (information be furnished)

d) if the effort of bringing the pressure on the Central Government has not done by the State Government till date, whether the step would be taken to construct the Gadduge of Samadhi of Ambigara Chowdaiah by getting permission by bringing pressure through visiting in person or by taking delegation to the officers of the Department of Archeological Survey of India which is coming under the Ministry of Culture ?

## COMPLETION OF VARAHI PROJECT

**Sri Manjunatha Bhandari (Local Authorities Constituency) -**

175 (1480) Will the Deputy Chief Minister be pleased to state:-

a) the quantum of drinking water is being supplied to the various taluks from the Varahi Project ; (information be furnished)

b) the date on which this project work has been commenced; the date on which it would be completed; the prevailing issues to complete the same ; (information be furnished)

c) the details of the length of kilometers of irrigation canal of the Varahi Project ; the total length of kilometer for which the water has been flowed from the said work and the reason for pending of canal work in the middle ; (in this regard complete details be furnished)

d) the total amount that has been spent till date for the Varahi Project by the neeravari nigam limited from 1999 to 2024 ; the particulars of projects for which the amount has been spent ; (in this regard complete details be furnished)

e) the particulars of works for which the amount has been provided to various taluks of Dakshina Kannada district in the name of Varahi project by the Karnataka Neeravari Nigam limited ;

f) the particulars of canals work of Varahi Project for which the permission is required by the Forest Department ; the particulars of the works which have been incompleted ; whether there is a necessity of land survey with regard to the said project ? (details be furnished)

## MAINTENANCE OF YERMARUS THERMAL POWER PLANT OF RAICHUR DISTRICT (YTPCL)

**Sri A. Vasantha Kumar (Elected by Legislative Assembly) -**

176 (1494) Will the Chief Minister be pleased to state:-

a) whether it is true that the maintenance of Yermarus Thermal Power Plant in Raichur taluk of Raichur district has been entrusted to the Power Mech Project limited of Hyderabad by inviting the tender ; if the company has appointed the technical and non-technical posts on outsourcing basis, whether the Reservation Rules has been complied as per the new (D.P.A.R. 06.2024) order of the Government ; (information be furnished)

b) whether the appointment of these posts has been made under Section 371(J) ;

c) whether the reservation of 75 percent for group A and group B posts, 80 percent for group C posts and 85 percent for group D posts have been provided for the localites in the appointment as per the Section 371 (A) of Rules ; if not, the steps that would be taken by the Government to rectify the same without causing injustice to the localites ;

d) the total number of technical and non-technical posts in the appointment ? (complete information be furnished)

## REGARDING LAKSHMANA TIRTHA RIVER

**Dr. D.Thimmaiah (Local Authorities Constituency) -**

177 (1420) Will the Minister for Minor Irrigation, Science and Technology be pleased to state:-

a) whether it has come to the notice of the Government that the water of Lakshmana Tirtha River which is flowing through Hunsuru City of Mysuru District has been stagnated without flowing and contaminated with pests insects and grown plant ;

b) whether the said river water is suitable for drinking to public; if so, the date on which the particular of the officers by whom the river water has subjected to test ; whether any report has been received thereof ? (complete information be furnished)

**ENCROACHMENT OF LAKES IN THE LIMIT OF B.B.M.P**

**Sri. Sharavana T.A. (Elected by Legislative Assembly) -**

178 (1423) Will the Deputy Chief Minister be pleased to state:-

a) various lakes in Bengaluru have been encroached and developed many decades ago, the prevailing rules for carrying out the developmental works in the said places ;

b) whether it has come to the notice of the Government that the region of lakes in various parts of Bengaluru have been developed completely and the officers have told that adjacent area of lakes cannot be developed as the places are coming under the Buffer Zone ;

c) if so, the reasons for denying permission for Buffer Zone development where there are no lakes ;

d) whether the C.D.P has been revised in the limits of the Bruhat Bengaluru Mahanagara Palike from 1990 till date ; if not, the reasons for the same ? (complete details be furnished)

## REGARDING MYSURU POLICE BHAVAN

**Sri. Adagur H. Vishwanath (Nominated) -**

179 (1427) Will the Minister for Home be pleased to state:-

a) the complete information regarding the case that has been lodged against the Police Welfare Trust (R) of Mysuru Police Bhavan by the Income Tax Department due to the non-payment of tax due from 31.03.2001 to 31.03.2024 be furnished ;

b) the information of notice that has been issued that the amount of tax should be paid by the Police Bhavan and Welfare Trusts and the name of the officers who are neglected for non-payment of the tax and GST during the period of the Police Commissioners ; (complete details be furnished)

c) the present stage of the case that has been lodged by the Trust (R) with regard to non-payment of GST to the Income Tax Department ; the details of amount that has to be paid; the copy of the objection that has been filed into that cases and complete documents be furnished ;

d) whether the amount has been deducted from the monthly salaries of Mysuru City Police Personnel and officers (from each member) in the form of installment for the payment of the dues to the Income Tax Department ; the particulars of sources from which the amount has been recovered ; (complete information be furnished)

e) whether the approval of plan from the Mysuru City Corporation and the permission from the Fire and Emergency Services Department has been obtained to construct the Mysuru Police Bhavan ? (obtained copy be furnished)

## COMMENCEMENT OF SUB DIVISION OF MINOR IRRIGATION AND GROUND WATER DEVELOPMENT DEPARTMENT

**Dr. Yathindra S (Elected by Legislative Assembly) -**

180 (1429) Will the Minister for Minor Irrigation, Science and Technology be pleased to state:-

a) the Varuna Assembly Constituency has 90% rural area, whether it has come to the notice of the Government that there is a necessity to commence the new sub division office of T.Narasipur/Varuna from the Minor Irrigation and Ground Water Development Department ;

b) if so, whether the proposal is before the Government to commence the said office in T.Narasipura ;

c) if so, the date on which the same would be commenced ?

**K.R. MAHALAKSHMI**
Secretary
Karnataka Legislative Council

Govt. Press, Vikasa Soudha Unit, Bengaluru, WD-926/P5